ಸಾಕ್ಷಿಯನ್ನು ದಿಃ 30.06.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು ಪಿಡಬ್ಲ್ಯೂ– 3

**ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:–**

1. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಅಂಶಗಳು ನನಗೆ ಗೊತ್ತಿಲ್ಲ. ಅರ್ಜಿದಾರರ ಹೆಸರು ಪೂರ್ಣಿಮ ಉಃ ಕೆಂಪಮ್ಮ. ಸದರಿಯವರು ನನ್ನ ಸಂಬಂಧಿಕರು. ಅರ್ಜಿದಾರರ ತಂದೆಗೆ ಇಬ್ಬರು ಹೆಂಡತಿಯರು. ಅರ್ಜಿದಾರರು ಕಿರಿಯ ಹೆಂಡತಿಯ ಮಗಳು.

2. ಅರ್ಜಿದಾರರ ಮದುವೆ ಕಾಲಕ್ಕೆ ಅವರ ತಂದೆ ಅವರ ಜೊತೆ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಮದುವೆ ಮಾತುಕತೆಗೆ ಹಾಗೂ ಅವರ ಮದುವೆಗೆ ಅವರ ತಂದೆ ಹಾಜರಿದ್ದರು. ಅದಕ್ಕೆ ಸಂಬಂಧಪಟ್ಟ ಭಾವಚಿತ್ರ ಇರಬಹುದು, ಆದರೆ ಅದು ಎದುರುದಾರರ ಮನೆಯಲ್ಲಿದೆ. ಅರ್ಜಿದಾರರು ಸ್ಥಿತಿವಂತರು, ಅವರ ಕುಟುಂಬದವರಿಗೆ 5 ಎಕರೆ ಜಮೀನಿದೆ ಹಾಗೂ ಅವರು ಮರದ ವ್ಯಾಪಾರ ಮಾಡುತ್ತಾರೆ. ಆದ್ದರಿಂದ ಅರ್ಜಿದಾರರಿಗೆ ಜೀವನಾಂಶದ ಅವಶ್ಯಕತೆಯಿಲ್ಲ ಎಂದರೆ ಸರಿಯಲ್ಲ.

3. ಶಂಕರೇಗೌಡರವರು ನನಗೆ ಗೊತ್ತಿಲ್ಲ. ಸದರಿಯವರು ಸದರಿಯವರ ಸೋದರಮಾವ ಎಂದರೆ ಸರಿ. ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಸದರಿಯವರಿಗೆ ಪುಟ್ಟ ಉಃ ನೀರೇಂದ್ರ ಎಂಬ ಮಗನಿದ್ದಾನೆಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2015 ರ ನಂತರದಿಂದ ಅರ್ಜಿದಾರರು ನಮ್ಮ ಊರಿನಲ್ಲಿ ವಾಸವಾಗಿದ್ದಾರೆ. ಅರ್ಜಿದಾರರು ಬೆಂಗಳೂರಿನ ವಿಜಯನಗರದಲ್ಲಿ ಡಾಕ್ಟರ್ ಗೆ ಸಹಾಯಕರಾಗಿ ಕೆಲಸ ಮಾಡುತ್ತಾ ಅಲ್ಲೇ ಶಂಕರೇಗೌಡರವರ ಮಗನಾದ ಪುಟ್ಟ ಉಃ ನೀರೇಂದ್ರರವರ ಜೊತೆಯಲ್ಲಿ ವಾಸವಾಗಿದ್ದಾರೆಂದರೆ ಸರಿಯಲ್ಲ. ವರದಕ್ಷಿಣೆ ಕಿರುಕುಳಕ್ಕಾಗಿ ಸಲ್ಲಿಸಿದ ಪ್ರಕರಣ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಎದುರುದಾರರು ಹಾಗೂ ಅವರ ಕುಟುಂಬದವರು ಬಿಡುಗಡೆಯಾಗಿದ್ದಾರೆಂದರೆ ನನಗೆ ಗೊತ್ತಿಲ್ಲ.

4. ಎದುರುದಾರರನ್ನು ಅವರ ಮದುವೆಯ ಮಾತುಕತೆ ಸಮಯದಲ್ಲಿ, ವರದಕ್ಷಿಣೆ ಕೊಡುವಾಗ, ಮದುವೆಯಲ್ಲಿ ಹಾಗೂ ಪಂಚಾಯಿತಿ ನಡೆದಾಗ ನೋಡಿರುತ್ತೇನೆ. ಆಗ ಎದುರುದಾರರು ಐ.ಟಿ.ಐ

ಮಾಡಿದ್ದಾರೆಂದು ತಿಳಿಸಿರುತ್ತಾರೆ. ಅರ್ಜಿದಾರರಿಗೆ ರೂ.50,000/- ಸಂಬಳ ಬರುತ್ತಿದ್ದ ಬಗ್ಗೆ ದಾಖಲೆ ನೋಡಿಲ್ಲ. ಮದುವೆ ಕಾಲಕ್ಕೆ ಎದುರುದಾರರು 3 - 4 ವರ್ಷಗಳಿಂದ ಕೆಲಸದಲ್ಲಿದ್ದರು. ಎದುರುದಾರರು ಐ.ಟಿ.ಐ ಓದಿ ಗುತ್ತಿಗೆ ಆಧಾರದ ಮೇಲೆ ಪ್ರತಿ ತಿಂಗಳು ರೂ.15,000/- ಸಂಬಳಕ್ಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

5. ಬೇರೆ ಮನೆ ಮಾಡಬೇಕೆಂದು ಯಾವುದೇ ಸಕಾರಣವಿಲ್ಲದೇ ಅರ್ಜಿದಾರರೇ ಮನೆ ಬಿಟ್ಟು ಹೋಗಿರುತ್ತಾರೆಂದರೆ ಸರಿಯಲ್ಲ. ಎದುರುದಾರರ ತಂದೆ ತಾಯಿ ಹಾಗೂ ಸಹೋದರಿಯರು ಅರ್ಜಿದಾರರಿಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮದುವೆಯಾದ ನಂತರ 2015 ಜನವರಿಯಲ್ಲಿ ಅರ್ಜಿದಾರರು ಮನೆ ಬಿಟ್ಟು ಹೋಗಿರುತ್ತಾರೆಂದರೆ ಸರಿಯಲ್ಲ. ಅರ್ಜಿದಾರರು ಎದುರುದಾರರಿಗೆ ಯಾವುದೇ ವಿಚಾರ ತಿಳಿಸದೇ ಗರ್ಭಪಾತ ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ.

6. ಎದುರುದಾರರು ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದಾರೆ ಹಾಗೂ ರೂ.1,00,000/- ಆದಾಯವಿದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಯಾವಾಗಿನಿಂದ ವಕೀಲರಾಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆಂದು ಗೊತ್ತಿಲ್ಲ. ನನಗೆ ಎದುರುದಾರರ ಬಗ್ಗೆ ಹಾಗೂ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಅರ್ಜಿದಾರರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ